# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 182
2. ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಾಣೇಶ್ ಎಂ. ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11/07/2018
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಸಚಿವರು

| ಪ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ನೊಂದಾವಣಿಯಾದ ಗಾರ್ಮೆಂಟ್ಸ್ ಕಾರ್ಮಿಕರ ಒಟ್ಟು ಸಂಖ್ಯೆ: 5,35,603 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಿದೆ). |
| ಆ | ಕಾರ್ಮಿಕರು ತಮ್ಮ ವೇತನಕ್ಕಾಗಿ ಮುಷ್ಕರ ನಿರತರಾಗಿದ್ದು, ಸರ್ಕಾರ ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ಕೈಗೊಂಡ ಕ್ರಮಗಳೇನು; | ಕಾರ್ಮಿಕರಿಗೆ ವೇತನ ಪಾವತಿ ಮಾಡದೇ ಇರುವ ಬಗ್ಗೆ/ನಿಗದಿತ ವೇತನಕ್ಕಿಂತ ಕಡಿಮೆ ವೇತನ ನೀಡುತ್ತಿರುವುದರ ಬಗ್ಗೆ ಕಾರ್ಮಿಕರು ಮುಷ್ಕರ ಹೂಡಿದ್ದಲ್ಲಿ ಅಥವಾ ಕ್ಲೇಮ್ ಅರ್ಜಿ ಸಲ್ಲಿಸಿದಲ್ಲಿ 1936ರ ವೇತನ ಪಾವತಿ ಕಾಯ್ದೆ, 1948ರ ಕನಿಷ್ಠ ವೇತನ ಕಾಯ್ದೆ ಹಾಗೂ 1947ರ ಕೈಗಾರಿಕಾ ವಿವಾದಗಳ ಕಾಯ್ದೆ ಯಡಿಯಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |
| ಇ | ಗಾರ್ಮೆಂಟ್ಸ್ ನೌಕರಿಗೆ ನೀಡುವ ಕನಿಷ್ಠ ವೇತನ ಎಷ್ಟು; | ➢ ರಾಜ್ಯ ಸರ್ಕಾರವು "ದರ್ಜಿ" ಅನುಸೂಚಿತ ಉದ್ದಿಮೆಗೆ ಕನಿಷ್ಠ ವೇತನ ದರಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 1 ಎಲ್ಎಂಡಬ್ಲ್ಯೂ 2013, ದಿನಾಂಕ: 21–02–2014 ರನ್ವಯ ಪರಿಷ್ಕರಿಸಲಾಗಿದ್ದು, ವಿವರವನ್ನು ಅನುಬಂಧ–2 ರಲ್ಲಿ ಒದಗಿಸಿದೆ.<br>➢ 2018–19 ನೇ ಸಾಲಿಗೆ ಸದರಿ ಅನುಸೂಚಿತ ಉದ್ದಿಮೆಗೆ ಅನ್ವಯವಾಗುವ ಕನಿಷ್ಠ ವೇತನ ದರಗಳ ಪಟ್ಟಿಯನ್ನು ಅನುಬಂಧ–3 ರಲ್ಲಿ ಒದಗಿಸಿದೆ. |
| ಈ | 2018ರ ಫೆಬ್ರವರಿಯಲ್ಲಿ ಹೊರಡಿಸಿದ್ದ ಕನಿಷ್ಠ ವೇತನದ ಆದೇಶವನ್ನು ಸರ್ಕಾರ ವಾಪಸ್ ಪಡೆದಿದೆ ಎಂಬ ಸುದ್ದಿ ನಿಜವೇ: | ಹೌದು |
| ಉ | ಗಾರ್ಮೆಂಟ್ಸ್ ಕಾರ್ಮಿಕರಿಗೆ ಕಾರ್ಮಿಕ ಇಲಾಖೆ ನಿಗಧಿಪಡಿಸಿದ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು? | ಕಾರ್ಮಿಕ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳಾದ 1948ರ ಕನಿಷ್ಠ ವೇತನ ಕಾಯೆ, 1965ರ ಬೋನಸ್ ಪಾವತಿ ಕಾಯ್ದೆ, 1976ರ ಸಮಾನ ವೇತನ ಕಾಯ್ದೆ, 1972ರ ಉಪದಾನ ಪಾವತಿ ಕಾಯ್ದೆ, 1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1946ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ |

| | | |
|---|---|---|
| | | ಆದೇಶಗಳು) ಕಾಯ್ದೆ, 1947ರ ಕೈಗಾರಿಕಾ ವಿವಾದಗಳ ಕಾಯ್ದೆ, ಮತ್ತು ಕಾರ್ಖಾನೆಗಳ ಕಾಯ್ದೆ, 1948 ಹಾಗೂ ಈ ಕಾಯ್ದೆಗಳಿಗೆ ರೂಪಿಸಿರುವ ನಿಯಮಾವಳಿಗಳನ್ವಯ ವಿವಿಧ ಶಾಸನಬದ್ಧ ಸೌಲಭ್ಯಗಳನ್ನು ಪಡೆಯಲು ಗಾರ್ಮೆಂಟ್ಸ್ ಕಾರ್ಮಿಕರು ಅರ್ಹರಾಗಿರುತ್ತಾರೆ.<br>ಗಾರ್ಮೆಂಟ್ಸ್ ಕಾರ್ಮಿಕರಿಗೆ ಈ ಸೌಲಭ್ಯಗಳನ್ನು ನೀಡದೆ ಇದ್ದ ಪ್ರಕರಣಗಳಲ್ಲಿ ಸಂಬಂಧಪಟ್ಟ ಕಾಯ್ದೆಗಳಡಿಯಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತದೆ. |

ಕಾಇ 44 ಕಾಬಾನಿ 2018

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

ಅನುಬಂಧ-1

**District wise Garm ents Factories**

| Sl No | Name of District | No of Fac List | No of Male workers | No of Female workers | Total workers |
|---|---|---|---|---|---|
| 1 | Bangalore Urban | 840 | 105876 | 328128 | 434004 |
| 2 | Bangalore Rural | 38 | 6878 | 16915 | 23793 |
| 3 | Bagalkot | 1 | 465 | 10 | 475 |
| 4 | Belgaum | 4 | 138 | 367 | 505 |
| 5 | Bellary | 3 | 144 | 287 | 431 |
| 6 | Bidar | 0 | 0 | 0 | 0 |
| 7 | Bijapur | 0 | 0 | 0 | 0 |
| 8 | Chamrajanagar | 1 | 50 | 95 | 145 |
| 9 | Chikkmagalur | 0 | 0 | 0 | 0 |
| 10 | Chitradurga | 8 | 228 | 925 | 1153 |
| 11 | Chikkaballapur | 9 | 615 | 4444 | 5059 |
| 12 | Davanagere | 8 | 228 | 925 | 1153 |
| 13 | Dakshina Kannada | 1 | 0 | 17 | 17 |
| 14 | Dharwad | 4 | 120 | 280 | 400 |
| 15 | Gadag | 0 | 0 | 0 | 0 |
| 16 | Gulbarga | 0 | 0 | 0 | 0 |
| 17 | Hassan | 7 | 1140 | 7675 | 8815 |
| 18 | Haveri | 2 | 270 | 825 | 1095 |
| 19 | Kodagu | 0 | 0 | 0 | 0 |
| 20 | Kolar | 13 | 1394 | 7590 | 8984 |
| 21 | Koppal | 0 | 0 | 0 | 0 |
| 22 | Mandya | 6 | 1860 | 7275 | 9135 |
| 23 | Mysore | 16 | 1423 | 9803 | 11226 |
| 24 | Raichur | 0 | 0 | 0 | 0 |
| 25 | Ramanagara | 16 | 2420 | 5350 | 7770 |
| 26 | Shimoga | 6 | 3377 | 6463 | 9840 |
| 27 | Tumkur | 11 | 3610 | 7420 | 11030 |
| 28 | Udupi | 3 | 193 | 380 | 573 |
| 29 | Uttara Kannada | 0 | 0 | 0 | 0 |
| 30 | Yadagiri | 0 | 0 | 0 | 0 |
| **Total** | | **997** | **130429** | **405174** | **535603** |

ಅನುಬಂಧ-2



4

| Sl. No. | Representatives of Labour Department |
|---|---|
| 1. | Deputy Labour Commissioner, Region-I,<br>Karmika Bhavana, Bannerughatta Road, Near Dairy Circle, Bangalore-560 029. |

By Order and in the name of the Governor of Karnataka,

**V.NAGESHA RAO**

Desk Officer-5,

Labour Department. (ESIS M Services)

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 69 ಎಲ್‌ಎಸ್‌ಐ 2013, ಬೆಂಗಳೂರು, ದಿನಾಂಕ : 15-02-2014.

ಕಾರ್ಮಿಕ ರಾಜ್ಯ ವಿಮಾ ನಿಗಮದ ಆಸ್ಪತ್ರೆ, ಪೀಣ್ಯ, ಇಲ್ಲಿಯ ಆಸ್ಪತ್ರೆ ಅಭಿವೃದ್ಧಿ ಸಮಿತಿಗೆ ಮಾಲೀಕ ವರ್ಗ, ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿ ಪ್ರತಿನಿಧಿಗಳನ್ನು ಈ ಕೆಳಕಂಡಂತೆ ನಾಮಾಂಕಿತಗೊಳಿಸಿ ಆದೇಶಿಸಲಾಗಿದೆ :-

| ಕ್ರ. ಸಂ. | ಮಾಲೀಕ ವರ್ಗದ ಪ್ರತಿನಿಧಿಗಳು |
|---|---|
| 1. | ಶ್ರೀ ಎಲ್. ಗಿರೀಶ್, ನಿರ್ದೇಶಕರು,<br>ಟ್ರೈಯಂಪ್ಸ್ ಮೆಕಾನಿಕ್ಸ್ ಪ್ರೈ. ಲಿ., ನಂ. 105/1, 14ನೇ ಅಡ್ಡ ರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003. |
| 2. | ಶ್ರೀ ಎನ್. ಆರ್. ಜಗದೀಶ್,<br>ಮೆ॥ ಜನ್ನ ಪ್ರೆಸಿಷನ್, ಸಿ-83, ಪೀಣ್ಯ 3ನೇ ಸ್ಟೇಜ್, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-560058. |

| ಕ್ರ. ಸಂ. | ಕಾರ್ಮಿಕ ವರ್ಗದ ಪ್ರತಿನಿಧಿಗಳು |
|---|---|
| 1. | ಶ್ರೀ ಜಿ.ಆರ್. ಶಿವಶಂಕರ್, (TUCC) (ಅಧ್ಯಕ್ಷರು),<br>ಸಂಖ್ಯೆ : 43, MIG 2ನೇ ಹಂತ, 2ನೇ ಮಹಡಿ, ಕೆ.ಹೆಚ್.ಬಿ. ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560079. |
| 2. | ಶ್ರೀ ಶಾಂತಕುಮಾರ್ (INTUC) (ಜನರಲ್ ಸೆಕ್ರೆಟರಿ)<br>ಸಂಖ್ಯೆ : 26/1, 2ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ವೈಯ್ಯಾಲಿಕಾವಲ್, ಬೆಂಗಳೂರು-560 003. |

| ಕ್ರ. ಸಂ. | ಕಾರ್ಮಿಕ ಇಲಾಖೆಯ ಪ್ರತಿನಿಧಿಗಳು |
|---|---|
| 1. | ಉಪ ಕಾರ್ಮಿಕ ಆಯುಕ್ತರು, ಪ್ರಾದೇಶಿಕ-1<br>(Deputy Labour Commissioner Region-1)<br>ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ಸರ್ಕಲ್ ಹತ್ತಿರ, ಬೆಂಗಳೂರು-560 029. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ನಾಗೇಶ ರಾವ್

ಪೀಠಾಧಿಕಾರಿ-5

ಕಾರ್ಮಿಕ ಇಲಾಖೆ. (ಕಾರಾವಿ ಯೋ ವೈ ಸೇವೆಗಳು).

PR. 138

SC-50

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 1 ಎಲ್‌ಎಂಡಬ್ಲ್ಯೂ 2013, ಬೆಂಗಳೂರು, ದಿನಾಂಕ : 21-02-2014.

ಕರ್ನಾಟಕ ರಾಜ್ಯಾದ್ಯಂತ "ದರ್ಜಿ" ಉದ್ದಿಮೆಯ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳನ್ನು ಸರ್ಕಾರದ ಅಧಿಸೂಚನೆ ಸಂ. ಕಾಇ 69 ಎಲ್‌ಎಂಡಬ್ಲ್ಯೂ 2009, ದಿನಾಂಕ : 30-03-2010ರಲ್ಲಿ ಪರಿಷ್ಕರಿಸಲಾಗಿತ್ತು. ಸದರಿ ಅಧಿಸೂಚನೆಯನ್ನು ರಿಟ್ ಪಿಟಿಷನ್ ಸಂಖ್ಯೆ : 7649/2010 ಮತ್ತು ರಿಟ್ ಪಿಟಿಷನ್ ಸಂಖ್ಯೆ : 14135/2010 (L-RES) ರ ಮೂಲಕ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಸದರಿ ರಿಟ್ ಪಿಟಿಷನ್‌ಗಳ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ : 11-03-2013ರಂದು ತೀರ್ಮ ನೀಡಿ, ದರ್ಜಿ ಉದ್ದಿಮೆಯ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಿಸಿ ಹೊರಡಿಸಿದ ದಿನಾಂಕ : 30-03-2010ರ ಅಂತಿಮ ಅಧಿಸೂಚನೆಯನ್ನು

ರದ್ದುಪಡಿಸಿರುತ್ತದೆ. ಅಲ್ಲದೆ ಕನಿಷ್ಠ ವೇತನ ಪರಿಷ್ಕರಣೆಯ ಬಗ್ಗೆ ಅರ್ಜಿದಾರ ಕಾರ್ಮಿಕ ಸಂಘ, ಆಡಳಿತ ವರ್ಗಗಳು ಮತ್ತು ಇತರೆ ಸಂಬಂಧಪಟ್ಟವರಿಗೆ ಅವಕಾಶವನ್ನು ನೀಡಿ ನಂತರ "ಯುಕ್ತ ಆದೇಶ" (Appropriate Order) ವನ್ನು ಹೊರಡಿಸುವಂತೆ ಹಾಗೂ ಅಲ್ಲಿಯವರೆಗೆ ಪ್ರಸ್ತುತ ಪಾವತಿಸುತ್ತಿರುವ ವೇತನ ದರಗಳನ್ನು ಮುಂದುವರೆಸುವಂತೆ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ "ದರ್ಜಿ" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆಯ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು, ಕನಿಷ್ಠ ವೇತನ ಕಾಯ್ದೆ 1948ರ ಸೆಕ್ಷನ್ 5(1)(ಎ)ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಕಾಇ 1 ಎಲ್‌ಎಂಡಬ್ಲ್ಯೂ 2013, ದಿನಾಂಕ : 24-10-2013 ರಲ್ಲಿ ಉಪ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಉಪ ಸಮಿತಿಯು ಸಭೆಗಳನ್ನು ನಡೆಸಿ, ಉದ್ದಿಮೆಗೆ ಸಂಬಂಧಪಟ್ಟವರಿಂದ ಅಹವಾಲು, ಸಲಹೆ ಮತ್ತು ಅಭಿಪ್ರಾಯಗಳನ್ನು ಸ್ವೀಕರಿಸಿ, ಸಭೆಯಲ್ಲಿ ಚರ್ಚಿಸಿ, ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಸದರಿ ಉಪ ಸಮಿತಿಯು ನೀಡಿರುವ ಶಿಫಾರಸ್ಸನ್ನು ಪರಿಶೀಲಿಸಿ, ಕನಿಷ್ಠ ವೇತನ ಕಾಯ್ದೆ 1948 (1948ರ ಕೇಂದ್ರಾಧಿನಿಯಮ ಸಂಖ್ಯೆ : XI ರ ಸೆಕ್ಷನ್ 3(1)(ಬಿ) ಮತ್ತು ಸೆಕ್ಷನ್ 5(1)(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಈ ಕೆಳಕಂಡ ಅನುಸೂಚಿಯಲ್ಲಿ ನಿಗದಿಪಡಿಸಿರುವಂತೆ ಕರ್ನಾಟಕ ರಾಜ್ಯಾದ್ಯಂತ ಯಾವುದೇ "ದರ್ಜಿ" ಉದ್ದಿಮೆಯ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳನ್ನು ದಿನಾಂಕ : 01-04-2014 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿದೆ.

ಅನುಸೂಚಿ

| ಕ್ರ ಸಂ. | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು | | | | | |
|---|---|---|---|---|---|---|---|
| | | ವಲಯ-1 | | ವಲಯ-2 | | ವಲಯ-3 | |
| I | ಅತಿಕುಶಲ | | | | | | |
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| 1. | ನಕಾಶೆ ಮಾಡುವವ | 240-00 | 6240-00 | 235-00 | 6110-00 | 230-00 | 5980-00 |
| 2. | ಗುರುತು ಮಾಡುವವ ಹಾಗೂ ಕತ್ತರಿಸುವವ | | | | | | |
| 3. | ದರ್ಜಿ | | | | | | |
| 4. | ನಕಾಶೆ ಹಾಗೂ ಕತ್ತರಿಸುವವ | | | | | | |
| II | ಕುಶಲ | | | | | | |
| 1. | ದರ್ಜಿ (1ನೇ ದರ್ಜೆ) | 232-00 | 6032-00 | 227-00 | 5902-00 | 222-00 | 5772-00 |
| 2. | ಮುಖ್ಯ ಅಡಿಗೆಯವ | | | | | | |
| 3. | ಡ್ರೈವರ್ (ಚಾಲಕ) | | | | | | |
| 4. | ಕತ್ತರಿಸುವ ಯಂತ್ರ ಚಾಲಕ | | | | | | |
| 5. | ಪರೀಕ್ಷಕರ | | | | | | |
| 6. | ದರ್ಜಿ ಮೇಸ್ತ್ರಿ | | | | | | |
| 7. | ಗುರುತು ಮಾಡಿ ಕತ್ತರಿಸುವವ | | | | | | |
| III | ಅರೆ ಕುಶಲ | | | | | | |
| 1. | ದರ್ಜಿ (2ನೇ ದರ್ಜೆ) | 229-00 | 5954-00 | 224-00 | 5824-00 | 219-00 | 5694-00 |
| 2. | ಖಾಜಾ ಮಿಷನ್ ಚಾಲಕ | | | | | | |
| 3. | ತಡೆ ಚಕ್ರದ ಮಿಷನ್ ಚಾಲಕ (ಓವರ್ ಲಾಕರ್) | | | | | | |
| 4. | ಇಸ್ತ್ರಿ ಮಾಡುವವ | | | | | | |
| 5. | ಅಳತೆ ಪರೀಕ್ಷಿಸುವವ | | | | | | |
| 6. | ಗುಂಡಿ ಖಾಜ ಹೊಲಿಯುವವ | | | | | | |
| 7. | ವಾಚ್ ಅಂಡ್ ವಾರ್ಡ್ | | | | | | |

| ಕ್ರ ಸಂ. | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು | | | | | |
|---|---|---|---|---|---|---|---|
| | | ವಲಯ-1 | | ವಲಯ-2 | | ವಲಯ-3 | |
| | ಕುಶಲರಲ್ಲದವರು | | | | | | |
| 1. | ಪ್ಯಾಕ್ ಮಾಡುವವ | 220-00 | 5720-00 | 215-00 | 5590-00 | 210-00 | 5460-00 |
| 2. | ವಿತರಣೆ ಮಾಡುವವ | | | | | | |
| 3. | ಬಟ್ಟೆ ಹರಡುವವ | | | | | | |
| 4. | ಟ್ರಿಮ್ ಮಾಡುವವ | | | | | | |
| 5. | ಸಹಾಯಕ | | | | | | |
| 6. | ರವಾನಿಸುವವ | | | | | | |
| 7. | ಮಾಲಿ | | | | | | |
| 8. | ಭೋಜನಾಲಯದ ಕೆಲಸಗಾರರು | | | | | | |
| 9. | ಕೂಲಿ | | | | | | |
| 10. | ದರ್ಜೆ-3ನೇ ದರ್ಜೆ | | | | | | |
| 11. | ಕುಶಲಲ್ಲದ ಇನ್ನಿತರ | | | | | | |
| IV | ಡ್ರೈವರ್ಸ್ | | | | | | |
| 1. | ಲಾರಿ ಡ್ರೈವರ್ | 246-50 | 6409-20 | 235-50 | 6123-20 | 225-50 | 5863-20 |
| 2. | ಕಾರ್/ಜೀಪ್ ಡ್ರೈವರ್ | 231-50 | 6019-20 | 221-50 | 5759-20 | 212-50 | 5525-20 |
| 3. | ಲಾರಿ/ಕಾರ್/ಜೀಪ್ ಕ್ಲೀನರ್ | 211-50 | 5499-20 | 202-50 | 5265-20 | 194-50 | 5057-20 |
| V | ಕಛೇರಿ ಸಿಬ್ಬಂದಿ | | | | | | |
| 1. | ಮ್ಯಾನೇಜರ್/ಪರ್ಸನಲ್ ಆಫೀಸರ್ | 280-50 | 7293-20 | 267-50 | 6955-20 | 255-50 | 6643-20 |
| 2. | ಅಸಿಸ್ಟೆಂಟ್ ಮ್ಯಾನೇಜರ್/ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 271-50 | 7059-20 | 259-50 | 6747-20 | 247-50 | 6435-20 |
| 3. | ಅಕೌಂಟೆಂಟ್ | 261-50 | 6799-20 | 249-20 | 6487-20 | 238-50 | 6201-20 |
| 4. | ಕ್ಯಾಷಿಯರ್ | 256-50 | 6669-20 | 245-50 | 6383-20 | 234-50 | 6097-20 |
| 5. | ಶೀಘ್ರಲಿಪಿಗಾರ/ಕಂಪ್ಯೂಟರ್ ಆಪರೇಟರ್ | | | | | | |
| 6. | ಸ್ಟೋರ್ ಕೀಪರ್ | | | | | | |
| 7. | ಬೆರಳಚ್ಚುಗಾರ/ಡಾಟಾ ಎಂಟ್ರೀ ಆಪರೇಟರ್/ಗುಮಾಸ್ತ/ಕ್ಲರ್ಕ್ | 251-50 | 6539-20 | 240-50 | 6233-20 | 229-50 | 5967-20 |
| 8. | ರಿಸೆಪ್ಷನಿಷ್ಟ್/ದೂರವಾಣಿ ನಿರ್ವಾಹಕ | | | | | | |
| 9. | ಆಫೀಸ್‌ಬಾಯ್/ಪ್ಯೂನ್/ವಾಚಮನ್/ ಅಟೆಂಡರ್ | 211-50 | 5499-20 | 202-50 | 5265-20 | 194-50 | 5057-20 |

ಟ್ಟಿಭತ್ಯೆ :-

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960-100) 5075 ಅಂಶಗಳಿಗೆ ಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 5075 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2012 ರಿಂದ ಡಿಸೆಂಬರ್ 2012)ರ ಸರಾಸರಿ ಆಧಾರದ ಮೇಲೆ 2013 ಏಪ್ರಿಲ್ 1ನೇ ತಾರೀಖಿನಿಂದ ರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಲೆಕ್ಕ ಹಾಕತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ :-

ಅ) ಮಾಸಿಕ ವೇತನವನ್ನು ಪಡೆಯುವವರು :- ಪ್ರತಿ ವರ್ಷ ಹೆಚ್ಚಾಗುವ ಸಿ ಪಿ ಐ ಅಂಶಗಳು X ತುಟ್ಟಿಭತ್ಯೆಯ ದರ X 30 ದಿನಗಳು=ತಿಂಗಳ ತುಟ್ಟಿಭತ್ಯೆ.

ಆ) ದಿನಗೂಲಿ ವೇತನ ಪಡೆಯುವವರು :-

ಪ್ರತಿ ವರ್ಷ ಹೆಚ್ಚಾಗುವ ಅಂಶಗಳು X ತುಟ್ಟಿಭತ್ಯೆಯ ದರ X 30 = ದಿನದ ತುಟ್ಟಿಭತ್ಯೆ

26

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ತರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು ಹಾಗೂ ಕಡ್ಡಾಯವಾಗಿ ಪ್ರತಿ ವರ್ಷ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಸಹ ಪಾವತಿಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ-ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

10. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಆಯಾ ಅಂಕಣಗಳಲ್ಲಿಯೇ ನಮೂದಿಸಿ ಪಾವತಿ ಮಾಡತಕ್ಕದ್ದು.

**ವಲಯ-1 :** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳು

**ವಲಯ-2 :** ರಾಜ್ಯದ ಉಳಿದ ಮಹಾನಗರ ಪಾಲಿಕೆ ಪ್ರದೇಶಗಳು.

**ವಲಯ-3 :** ವಲಯ-1 ಮತ್ತು 2ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪ್ರಭುದೇವ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**PR. 139**
**SC-300**

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ : ಲಾ 178 ಎಲ್ಎಜಿ 2013, ಬೆಂಗಳೂರು, ದಿನಾಂಕ : 12-02-2014.**

ಶ್ರೀ ವಿ.ಎ. ನಾಯ್ಕ ಅಪರ ಸರ್ಕಾರಿ ವಕೀಲರು, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ-ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 5(6) ರಡಿಯಲ್ಲಿ ಅಪರ ಸರ್ಕಾರಿ ವಕೀಲರ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ ಹಾಗೂ ಸದರಿಯವರಿಗೆ ಒಂದು ತಿಂಗಳ ನೋಟೀಸ್‌ನ ಬದಲು ಒಂದು ತಿಂಗಳ ರಿಟೇನರ್ ಫೀ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಎಸ್. ಜಯರಾಮು
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

**PR. 140**
**SC-25**

ಅನುಬಂಧ-ಔ

## 67. TAILORING INDUSTRY

Notification No. KAE 1 LMW 2013 dated 21-02-2014

Published in Gazette dated 21-02-2014

Minimum Wages With effect from 01-04-2014

Cost of Living Allowance to be paid over and above 5075 points

Cost of Living Index: 7106– 5075 = 2031 points

Minimum wages and VDA from 01-04-2018 to 31-03-2019.

**SCHEDULE**

| Sl. No. | Class of Employment | | Minimum rates of wages | | | | | |
|---|---|---|---|---|---|---|---|---|
| | | | Zone-I | | Zone-II | | Zone-III | |
| | | | Per day | Per month | Per day | Per month | Per day | Per month |
| **I** | **HIGHLY SKILLED:** | | | | | | | |
| 1 | Designer | Basic | 240.00 | 6240.00 | 235.00 | 6110.00 | 230.00 | 5980.00 |
| 2 | Maker Doing Cutting | VDA | 93.74 | 2437.20 | 93.74 | 2437.20 | 93.74 | 2437.20 |
| 3 | Tailor | **Total** | **333.74** | **8677.20** | **328.74** | **8547.20** | **323.74** | **8417.20** |
| 4 | Cutter employed on designing & cutting | | | | | | | |
| **II** | **SKILLED:** | | | | | | | |
| 1 | Tailor Grade-1 | | | | | | | |
| 2 | Head Cook | | | | | | | |
| 3 | Driver | Basic | 232.00 | 6032.00 | 227.00 | 5902.00 | 222.00 | 5772.00 |
| 4 | Cutting Machine Operator | VDA | 93.74 | 2437.20 | 93.74 | 2437.20 | 93.74 | 2437.20 |
| 5 | Inspector | **Total** | **325.74** | **8469.20** | **320.74** | **8339.20** | **315.74** | **8209.20** |
| 6 | Tailor Maistry | | | | | | | |
| 7 | Layer who does cutting & marking | | | | | | | |
| **III** | **SEMI-SKILLED:** | | | | | | | |
| 1 | Ironer | | | | | | | |
| 2 | Measurement Checker | | | | | | | |
| 3 | Watch & Ward | Basic | 229.00 | 5954.00 | 224.00 | 5824.00 | 219.00 | 5694.00 |
| 4 | Tailor Grade-II | VDA | 93.74 | 2437.20 | 93.74 | 2437.20 | 93.74 | 2437.20 |
| 5 | Button Hole Machine | Total | 322.74 | 8391.20 | 317.74 | 8261.20 | 312.74 | 8131.20 |

| | | | | | | | | |
|---|---|---|---|---|---|---|---|---|
| 6 | Over locker machine | | | | | | | |
| 7 | Button and Buttonhole stich | | | | | | | |
| IV | **UNSKILLED:** | | | | | | | |
| 1 | Packer | | | | | | | |
| 2 | Helper | Basic | 220.00 | 5720.00 | 215.00 | 5590.00 | 210.00 | 5460.00 |
| 3 | Despatcher | VDA | 93.74 | 2437.20 | 93.74 | 2437.20 | 93.74 | 2437.20 |
| 4 | Mali | **Total** | **313.74** | **8157.20** | **308.74** | **8027.20** | **303.74** | **7897.20** |
| 5 | Canteen Worker | | | | | | | |
| 6 | Server | | | | | | | |
| 7 | Trimmer | | | | | | | |
| 8 | Mazdoor | | | | | | | |
| 9 | Layer who spreads only | | | | | | | |
| 10 | Tailor Grade-III | | | | | | | |
| 11 | Any other category of unskilled worker not specified above | | | | | | | |
| V | **Drivers** | | | | | | | |
| 1 | Lorry Driver | Basic<br>VDA<br>**Total** | 246.50<br>93.74<br>340.24 | 6409.20<br>2437.20<br>8846.40 | 235.50<br>93.74<br>329.24 | 6123.20<br>2437.20<br>8560.40 | 225.50<br>93.74<br>319.24 | 5863.20<br>2437.20<br>8300.40 |
| 2 | Car/Jeep Driver | Basic<br>VDA<br>**Total** | 231.50<br>93.74<br>**325.24** | 6019.20<br>2437.20<br>**8456.40** | 221.50<br>93.74<br>**315.24** | 5759.20<br>2437.20<br>**8196.40** | 212.50<br>93.74<br>**306.24** | 5525.20<br>2437.20<br>**7962.40** |
| 3 | Lorry/Jeep/Car Cleaner | Basic<br>VDA<br>**Total** | 211.50<br>93.74<br>305.24 | 5499.20<br>2437.20<br>**7936.40** | 202.50<br>93.74<br>**296.24** | 5265.20<br>2437.20<br>7702.40 | 194.50<br>93.74<br>**288.24** | 5057.20<br>2437.20<br>**7494.40** |
| VI | **OFFICE STAFF:** | | | | | | | |
| 1 | Manager/Personal Officer | Basic<br>VDA<br>**Total** | 280.50<br>93.74<br>**374.24** | 7293.20<br>2437.20<br>9730.40 | 267.50<br>93.74<br>**361.24** | 6955.20<br>2437.20<br>**9392.40** | 255.50<br>93.74<br>**349.24** | 6643.20<br>2437.20<br>**9080.40** |
| 2 | Assistant Manager/ Assistant Personal Officer | Basic<br>VDA<br>**Total** | 271.50<br>93.74<br>**365.24** | 7059.20<br>2437.20<br>**9496.40** | 259.50<br>93.74<br>**353.24** | 6747.20<br>2437.20<br>**9184.40** | 247.50<br>93.74<br>**341.24** | 6435.20<br>2437.20<br>**8872.40** |
| 3 | Accountant | Basic<br>VDA<br>**Total** | 261.50<br>93.74<br>**355.24** | 6799.20<br>2437.20<br>**9236.40** | 249.50<br>93.74<br>**343.24** | 6487.20<br>2437.20<br>**8924.40** | 238.50<br>93.74<br>**332.24** | 6201.20<br>2437.20<br>**8638.40** |

| | | | | | | | | |
|---|---|---|---|---|---|---|---|---|
| 4 | Cashier | Basic | 256.50 | 6669.20 | 245.50 | 6383.20 | 234.50 | 6097.20 |
| 5 | Stenographer/ Computer Operator | VDA | 93.74 | 2437.20 | 93.74 | 2437.20 | 93.74 | 2437.20 |
| 6 | Store keeper | **Total** | **350.24** | **9106.40** | **339.24** | **8820.40** | **328.24** | **8534.40** |
| 7 | Typist/Data Entry Operator | Basic | 251.50 | 6539.20 | 240.50 | 6253.20 | 229.50 | 5967.20 |
| | | VDA | 93.74 | 2437.20 | 93.74 | 2437.20 | 93.74 | 2437.20 |
| 8 | Clerk | **Total** | **345.24** | **8976.40** | **334.24** | **8690.40** | **323.24** | **8404.40** |
| 9 | Office boy/peon/ watchman/ attender | Basic | 211.50 | 5499.20 | 202.50 | 5265.20 | 194.50 | 5057.20 |
| | | VDA | 93.74 | 2437.20 | 93.74 | 2437.20 | 93.74 | 2437.20 |
| | | **Total** | **305.24** | **7936.40** | **296.24** | **7702.40** | **288.24** | **7494.40** |

**Zone – I :** Bruhat Bangalore Mahanagara Palike Areas.

**Zone – II :** Remaining areas of Mahanagara Palika's in the State.

**Zone – III :** Other than the places mentioned in Zone-1 & Zone-2

**V.D.A :** In addition to the basic wages, all Category of Employees in the state shall ~~be~~ paid V.D.A. at the rate of 4 Paise per point over and above 5075 points.

Note: The Minimum Rates of Wages notified above ~~are~~ subject to the Writ Petition No. 19931-936/2014, pending before the Hon'ble High Court of Karnataka.